[ Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 356/23**

**ಪಿ.ಡಬ್ಲ್ಯು : 1** **ಸಿ.ಡಬ್ಲ್ಯು : 1**

ಸಾಕ್ಷಿದಾರಳ ಹೆಸರು : ಸೌಮ್ಯ ಶೆಟ್ಟಿ
ಗಂಡನ ಹೆಸರು : ಸಂದೀಪ್ ಶೆಟ್ಟಿ
ಪ್ರಾಯ : 36 ವರ್ಷ
ಉದ್ಯೋಗ : ಮುನಿಸಿಪಾಲಿಟಿ ಕೌನ್ಸಿಲರ್
ವಾಸ : ಅಲಂಗಾರು, ಮೂಡಬಿದ್ರೆ

ದಿನಾಂಕ 20.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-**</u>

ಆರೋಪಿತರನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ.

ಚಾಸಾ-2 ಪರಿಚಯ ಇದೆ. ಅವರು ನನ್ನ ಚಿಕ್ಕಪ್ಪನ ಮಗಳು. ದಿ: 14-12-2022 ರಂದು ಬಜಗೋಳಿಯಿಂದ ಬೆಳುವಾಯಿಗೆ ಆಟೋ ರಿಕ್ಷಾದಲ್ಲಿ ನಾನು, ಚಾಸಾ 2 ಹಾಗೂ ನನ್ನ ಮಗ ಬರುತ್ತಿದ್ದು ಆಟೋವನ್ನು ನನ್ನ ಚಿಕ್ಕಪ್ಪ ವಿಜಯ ಶೆಟ್ಟಿಯವರು ಚಾಲನೆ ಮಾಡುತ್ತಿದ್ದರು. ರಾತ್ರಿ 8.50 ರ ಸಮಯದಲ್ಲಿ ಕರಿಯಕಲ್ಲು ಜಂಕ್ಷನ್ ನ ರಾಕ್‌ಸೈಡ್ ಬಾರ್ ಬಳಿ ನಮ್ಮ ಎದುರುಗಡೆಯಿಂದ ದ್ವಿಚಕ್ರ ವಾಹನದಲ್ಲಿ ಓರ್ವ ವ್ಯಕ್ತಿಯು ಅತೀವೇಗವಾಗಿ ಬಂದು ನಮ್ಮ ಆಟೋ ರಿಕ್ಷಾಕ್ಕೆ ಅಡ್ಡ ಬಂದಿರುತ್ತಾರೆ. ಅದನ್ನು ತಪ್ಪಿಸಲು ರಿಕ್ಷಾ ಚಾಲಕ ಒಮ್ಮೆಲೇ ಬ್ರೇಕ್ ಹಾಕಿದ ಪರಿಣಾಮ ಆಟೋ ರಿಕ್ಷಾ ಪಲ್ಟಿಯಾಗಿರುತ್ತದೆ. ಚಾಸಾ 2 ರವರಿಗೆ ಕೈಗೆ ಮತ್ತು ಕಿವಿಗೆ ಸ್ವಲ್ಪ ಗಾಯವಾಗಿರುತ್ತದೆ. ರಿಕ್ಷಾ ಓಡಿಸುತ್ತಿದ್ದ ನಮ್ಮ ಚಿಕ್ಕಪ್ಪ ಆಟೋಯಿಂದ ಹೊರಗೆ ಬಿದಿದ್ದು ಅವರ ಎದೆಗೆ ಒಳನೋವಾಗಿರುತ್ತದೆ. ಅಲ್ಲಿಂದ ಅವರನ್ನು ಕಾರ್ಕಳ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು ಅಲ್ಲಿ ಪರಿಶೀಲಿಸಿದ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ಲಾಕ್

ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾರೆ. ಅದರಂತೆ ಕರೆದುಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯೆ ಮುಲ್ಕಿ ಎಂಬಲ್ಲಿ ಅವರಿಗೆ ಆರೋಗ್ಯದಲ್ಲಿ ವ್ಯತ್ಯಾಸವಾಗಿದ್ದು ಅವರನ್ನು ಅಲ್ಲಿನ ಸ್ಥಳೀಯ ಶ್ರೀನಿವಾಸ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಪರೀಕ್ಷಿಸಿದ ವೈದ್ಯರು ಅವರು ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಅಪಘಾತಕ್ಕೆ ಬೈಕ್ ಸವಾರ ಒಮ್ಮೇಲೆ ಅಡ್ಡ ಬಂದಿರುವುದು ಕಾರಣವಾಗಿರುತ್ತದೆ. ಘಟನೆ ಕುರಿತು ನಾನು ಮರುದಿನ ಪಿರ್ಯಾದು ನೀಡಿರುತ್ತೇನೆ. ಸಾಕ್ಷಿಯು ಪಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಿರ್ಯಾದಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಂಜೆ ಪೋಲಿಸರು ಸ್ಥಳ ಮಹಜರಿಗಾಗಿ ತಕ್ಷೀರು ಸ್ಥಳಕ್ಕೆ ಬಂದಿದ್ದು ನಾನು ತೋರಿಸಿಕೊಟ್ಟಂತೆ ಚಾಸಾ 8 ಮತ್ತು 9 ರವರ ಸಮಕ್ಷಮ ಸ್ಥಳ ಮಹಜರು ಮಾಡಿ, ನಕಾಶೆ ತಯಾರಿಸಿ ಭಾವಚಿತ್ರ ತೆಗೆದು ತಕ್ಷೀರಿಗೆ ಸಂಬಂಧಿಸಿದ ಆಟೋ ರಿಕ್ಷಾ ಹಾಗೂ ದ್ವಿಚಕ್ರ ವಾಹನವನ್ನು ಸವಾರ ಧರಿಸಿದ ಹೆಲ್ಮೇಟ್ ಅನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಸಾಕ್ಷಿಯು ತಕ್ಷೀರು ಸ್ಥಳ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯು ಮಹಜರು ಸಮಯ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಯು ತಕ್ಷೀರಿಗೆ ಸಂಬಂಧಿಸಿದ ದ್ವಿಚಕ್ರ ವಾಹನ ಹಾಗೂ ಆಟೋ ರಿಕ್ಷಾದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ನಿಪಿ5 ರಿಂದ 12 ಎಂದು ಗುರುತಿಸಲಾಯಿತು.

ಪೋಲಿಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲು : ಆರೋಪಿತರ ಪರ : ಶ್ರೀ ಆರ್ ಎಸ್ ವಕೀಲರಿಂದ :

ದ್ವಿಚಕ್ರ ವಾಹನ ಸವಾರನ್ನು ಅಡ್ಡ ಬಂದ ಕಾರಣದಿಂದ ಅದನ್ನು ತಪ್ಪಿಸಲು ಒಮ್ಮೇಲೆ ಬ್ರೇಕ್ ಹಾಕಿದ ಪರಿಣಾಮ ಆಟೋ ರಿಕ್ಷಾ ಪಲ್ಟಿಯಾಗಿರುತ್ತದೆ. ಚಾಸಾ 4 ಮೃತ ವಿಜಯ ಶೆಟ್ಟಿಯವರ ಮಗ. ಚಾಸಾ 4 ರವರ ವಿಚಾರಣೆಯನ್ನು ಪೋಲಿಸರು ಮಾಡಿರುತ್ತಾರೆ. ಚಾಸಾ 4 ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಹೇಳಿಕೆಯನ್ನು ನೀಡಿರುತ್ತಾರೆ. ನಾನು ನಿಪಿ-1 ರಲ್ಲಿ ಯಾರ ನಿರ್ಲಕ್ಷ್ಯತನದಿಂದ ಅಪಘಾತವಾಯಿತು ಎಂದು ಹೇಳಿರುವುದಿಲ್ಲ. ನಾನು ದಿಃ 15-12-2022 ರಂದು ಪೋಲಿಸರ ಮುಂದೆ ನೀಡಿದ ಮರುಹೇಳಿಕೆ ಸತ್ಯವಾಗಿರುತ್ತದೆ. ಸದರಿ ಹೇಳಿಕೆಯಲ್ಲಿ ನಾನು "ಆಟೋ ರಿಕ್ಷಾ ಚಾಲಕರು ಅತೀವೇಗದಲ್ಲಿ ಇದ್ದ ರಿಕ್ಷಾಕ್ಕೆ ........................................ ಮೇಟಾರು ಸೈಕಲ್ ಗೆ ಡಿಕ್ಕಿ ಹೊಡೆದಿರುವುದೇ ಕಾರಣವಾಗಿರುತ್ತದೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯನ್ನು ನೀಡುವಾಗ ಯಾರ ಒತ್ತಡವೂ ಇರಲಿಲ್ಲ. ಸಾಕ್ಷಿಯು ನಾನು ಮರುಹೇಳಿಕೆಯನ್ನು ನೀಡಿರುತ್ತೇನೆ ನಾನು ಮರುಹೇಳಿಕೆಯನ್ನು ನೀಡುವಾಗ ಪೋಲಿಸರು ಬರೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಮೂಲತಃ ಮೂಡಬಿದ್ರೆಯವರು. ನಾನು ತಕ್ಷೀರು ನಡೆದಿದೆ ಎಂದು ಹೇಳುವ ಸ್ಥಳದ ಪರಿಚಯ ಇದೆ. ಸದರಿ ಜಂಕ್ಷನ್ ನಿಂದ ರಸ್ತೆಗಳು ಬಜಗೋಳಿ ಕಡೆಗೆ, ಮೂಡಬಿದ್ರೆ, ಕಾರ್ಕಳ ಮತ್ತು ನಿಟ್ಟೆ ಕಡೆಗೆ ಇರುತ್ತದೆ. ನಮ್ಮ ಚಿಕ್ಕಪ್ಪ ನ ರಿಕ್ಷಾ ನಂ. ಕೆಎ-19-ಎಎ-0763 ಗೆ ಅಪಘಾತ ಸಮಯದಲ್ಲಿ ತಕ್ಷೀರು ಆಗಿದೆ ಎಂದು ಹೇಳುವ ಸ್ಥಳದಲ್ಲಿ ಚಲಿಸಲು ಅನುಮತಿ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಟೋ ರಿಕ್ಷಾವನ್ನು ದಕ್ಷಿಣ ಕನ್ನಡ ಜಿಲ್ಲೆ ಹೊರತು ಪಡಿಸಿ ಬೇರೆ ಜಿಲ್ಲೆಗೆ ಅನುಮತಿ ಇಲ್ಲದೇ ತೆಗೆದುಕೊಂಡು ಹೋಗಬಾರದು ಎಂದು ಗೊತ್ತಿರುತ್ತದೆ.

ತಕ್ಷೀರು ನಡೆದಿದೆ ಎಂದು ಹೇಳುವ ಸ್ಥಳ ರಾಕ್‌ಸೈಡ್ ಬಾರ್ ಎದುರುಗಡೆ ಇರುವ ಎರಡು ರಸ್ತೆಗಳ ನಡುವೆ ಆಗಿರುತ್ತದೆ. ಸದರಿ ರಸ್ತೆಯಲ್ಲಿ ಜನರು ರಸ್ತೆಯನ್ನು ದಾಟುತ್ತಿರತ್ತಾರೆ. ನೋಡಿಕೊಂಡು ಹೋದರೆ ಅಪಘಾತವನ್ನು ತಪ್ಪಿಸಬಹುದು. ಮೋಟಾರು ಸೈಕಲನ್ನು ಅಂದಾಜು 50 ಮೀ ದೂರದಿಂದ ಗಮನಿಸಿರುತ್ತೇನೆ. ರಿಕ್ಷಾ ಚಾಲಕನು 50 ಮೀ

ದೂರದಿಂದಲೇ ಬ್ರೇಕ್ ಹಾಕಿರುತ್ತಾರೆ. ಮೋಟಾರು ವಾಹನಕ್ಕೆ ಅಪಘಾತದಿಂದ ಏನು ಜಖಂ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ವಿಜಯ ಶೆಟ್ಟಿಯವರು ಈ ಪ್ರಕರದಲ್ಲಿ 2 ನೇ ಆರೋಪಿ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿಜಯ್ ಶೆಟ್ಟಿಯವರನ್ನು ಯಾವ ಕಾರಣದಿಂದ 2 ನೇ ಆರೋಪಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸತ್ಯಕ್ಕೆ ದೂರವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಿಮೆ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ದ್ವಿಚಕ್ರ ವಾಹನಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರ ವೈದ್ಯಕೀಯ ಚಿಕಿತ್ಸೆ ಕುರಿತು ದಾಖಲೆಗಳನ್ನು ಪೋಲಿಸರು ಪಡೆದುಕೊಂಡಿರುರುವುದಿಲ್ಲ. ನನಾಗಲಿ್ೀ ಚಾಸಾ 2 ರವರಾಗಲೀ ಆಟೋ ರಿಕ್ಷಾದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮಹಜರು ಸಮಯದಲ್ಲಿ ನಿಪಿ-5 ರಿಂದ 8 ಭಾವಚಿತ್ರಗಳಲ್ಲಿರುವ ದ್ವಿಚಕ್ರ ವಾಹನವನ್ನು ಪೋಲಿಸರು ತೋರಿಸಿದ್ದು ಆ ಆಧಾರ ಮೇಲೆ ಗುರುತಿಸಿರುತ್್ೀನೆ. ನಿಪಿ-1 ನೀಡಿದ ನಂತರ ಮಹಜರು ಮಾಡಿರುತ್ತಾರೆ. ನಿಪಿ-1 ರಲ್ಲಿ ದ್ವಿಚಕ್ರ ವಾಹನ ನಂಬರ್ ಅನ್ನು ನಮೂದಿಸಲು ಚಾಸಾ4 ರವರು ತಿಳಿಸಿರುತ್ತಾರೆ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the CW 5 to 14. As the eye witness Pw 1 to 4 have completly turned hostile to the case of prosecution. No purpose will be served by issuance of summons to CW 5 to 14. Hence by rejecting the prayer of learned APP evidence of CW 5 to 14 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for Arguments.

Call on 14-07-2023.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and

got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for

compliance Under 437A and Arguments.

Call on : 17.08.2021

Prl. Civil Judge & JMFC.
Karkala